**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.ನಂಃ 392/2023**

ಫಿರ್ಯಾದಿ : ಶ್ರೀಮತಿ ಶೀಲಾರಾಣಿ ಕೋಂ ವೆಂಕಟೇಶ್,
ವಯಸ್ಸು ಸುಮಾರು 35 ವರ್ಷ,
ವಾಸಃ ಪಿ.ಡಬ್ಲ್ಯೂ..ಡಿ ಕ್ವಾರ್ಟರ್ಸ್,
ಜೈನ್ ದೇವಸ್ಥಾನದ ಮುಂಭಾಗ,
ಮೂಡಿಗೆರೆ ಪಟ್ಟಣ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀ ಸೈಯದ್ ಆರೀಫ್ ಬಿನ್ ಅಯೂಬ್,
ವಯಸ್ಸು ಸುಮಾರು 34 ವರ್ಷ,
ವಾಸಃ ಶಾಂತಿನಗರ, ಕೃಷ್ಣಾಪುರ,
ಮೂಡಿಗೆರೆ ಅಂಚೆ ಮತ್ತು ತಾಲ್ಲೂಕು.

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿ ಹೇಳಿಕೆ

ಪ್ರಶ್ನೆ.1) ಫಿರ್ಯಾದುದಾರರ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ ಕೇಳಿದ್ದೇನೆ.

ಪ್ರಶ್ನೆ.2) ಪ್ರಾಸಾ-1 ಶೀಲಾರಾಣಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಫಿರ್ಯಾದುದಾರನ್ನು ಸಂಪರ್ಕಿಸಿ, ನಿಮ್ಮ ಕಾನೂನು ಬದ್ಧ ಅವಶ್ಯಕತೆಗಳಿಗೋಸ್ಕರ ಅವರಿಂದ 1,85,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮೂಡಿಗೆರೆ ಶಾಖೆಯ ಚೆಕ್ ಸಂಖ್ಯೆ324419, ದಿನಾಂಕ 17.01.2023, ರೂ.1,85,000/- ಎಂದು ನಮೂದಿಸಿ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು.

ಪ್ರಶ್ನೆ.3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ಕನ್ನು ಫಿರ್ಯಾದಿಯು ಅವರ ಖಾತೆ ಇರುವ ಸದರಿ ಬ್ಯಾಂಕಿನಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ

(Funds Insufficient)ಎಂದು ದಿನಾಂಕಃ 18.01.2023 ರಂದು ಹಿಂಬರಹದ ಮೂಲಕ ಹಿಂದಿರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು.

ಪ್ರಶ್ನೆ.4) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿನಾಂಕಃ 30.01.2023 ರಂದು ನಿಮಗೆ ಕಾನೂನುಬದ್ಧ ನೋಟೀಸು ನೀಡಿ ತಿಳಿಸಿದ್ದು, ಸದರಿ ನೋಟೀಸು ನೀವು ಪಡೆದುಕೊಳ್ಳದ ಕಾರಣ ವಾಪಾಸ್ಸಾಗಿರುತ್ತದೆ, ಆ ಪ್ರಕಾರ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ಅಡಿ ಅಪರಾಧ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃಸುಳ್ಳು.

ಪ್ರಶ್ನೆ.5) ನಿಮ್ಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಆರೋಪಿಯ ಉತ್ತರಃಇಲ್ಲ.

ಪ್ರಶ್ನೆ.6) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಆರೋಪಿಯ ಉತ್ತರಃ ಇದೆ.

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

ಮೂಡಿಗೆರೆ.
ದಿನಾಂಕಃ 25.02.2025.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಆರೋಪಿಯ ಸಹಿಃ